




ಕುರುಕ್ಷೇತ್ರ ಯುದ್ಧದಲ್ಲಿ ಒಮ್ಮೆಗೇ ಎಂಟು ಕೌರವರನ್ನು ವಧೆ ಮಾಡಿದ ಭೀಮ



ಶಕುನಿಯ ಉಪಸ್ಥಿತಿಯಲ್ಲಿ ಕೌರವ ಮತ್ತು ಪಾಂಡವರ ಪಗಡೆ ಆಟ ↑

↓ ಯುದ್ಧಭೂಮಿಯಲ್ಲಿ ಅರ್ಜುನನಿಗೆ ಶ್ರೀಕೃಷ್ಣನಿಂದ ವಿಶ್ವರೂಪ ದರ್ಶನ



27 ವರ್ಷಕ್ಕೂ ಅಧಿಕ ಅನುಭವ ಹೊಂದಿರುವ ಅವರಿಗೆ, ಚಿಕ್ಕಂದಿನಿಂದಲೂ ಚಿತ್ರಕಲೆಯಲ್ಲಿ ಆಸಕ್ತಿಯಿದೆ. ಆದರೆ, ಆ ಆಸಕ್ತಿಗೆ ಅವಕಾಶ ಮತ್ತು ಕಾಲ ಕೂಡಿಬಂದದ್ದು ಈಚೆಗೆ.

2017ರಲ್ಲಿ ಕೆಲಸ ಮಾಡುತ್ತಿದ್ದ ಖಾಸಗಿ ಕಂಪನಿ ಮುಚ್ಚಿಹೋದಾಗ ಸ್ವಾಮಿ ಅವರಿಗೆ ಅನಿರೀಕ್ಷಿತ ಬಿಡುವು. ಮನೆಯಲ್ಲಿ ಖಾಲಿ ಕುಳಿತಾಗ ತಲೆಗೆ ಹೊಳೆದದ್ದು ಕ್ಯಾನ್ವಾಸ್‌ನಲ್ಲಿ ತೈಲವರ್ಣ ಚಿತ್ರ ಬಿಡಿಸುವ ಯೋಚನೆ. ಪಾಂಡವರು ಅರಗಿನ ಅರಮನೆಯಿಂದ ತಪ್ಪಿಸಿಕೊಂಡು ಹೋಗುವ ಸನ್ನಿವೇಶವನ್ನು ಚಿತ್ರಿಸಿದರು. ಆ ಚಿತ್ರ ಚೆನ್ನಾಗಿದೆ ಅನ್ನಿಸಿದಾಗ, ಮಹಾಭಾರತ ಕಥನವನ್ನು ಆಧರಿಸಿ ಸರಣಿ ಚಿತ್ರಗಳನ್ನು ಮಾಡಿದರೆ ಹೇಗೆ ಎನ್ನುವ ಯೋಚನೆ ಬಂತು. ಅದರ ಫಲವೇ 178 ಚಿತ್ರಗಳ 'ಮಹಾಭಾರತ ಸರಣಿ ತೈಲಚಿತ್ರಕಲೆ'.

ಜಲವರ್ಣ, ಅಕ್ರಲಿಕ್ ಮುಂತಾದ ಚಿತ್ರಕಲೆಯ ಶೈಲಿಗಿಂತಲೂ ಹೆಚ್ಚು ಪರಿಣಾಮಕಾರಿ ಅನ್ನಿಸಿದ್ದರಿಂದ, ಸ್ವಾಮಿ ಅವರು ತಮ್ಮ ಮಹಾಭಾರತ ಸರಣಿ ಚಿತ್ರಗಳಿಗೆ ತೈಲವರ್ಣವನ್ನೇ ಆಯ್ಕೆ ಮಾಡಿಕೊಂಡರು.

ಭಾರತೀಯ ಸಂಸ್ಕೃತಿ ಮತ್ತು ಮಹಾಭಾರತದ ಅಧ್ಯಯನ ಮಾಡಿರುವ ಇಟಲಿಯ ಕಲಾವಿದ ಜಿಯಂಪಾವ್ಲ್ ಥೋಮಸೆಟ್ಟಿ ಅವರು ದೊಡ್ಡ ಕ್ಯಾನ್ವಾಸ್‌ನಲ್ಲಿ ಮಹಾಭಾರತದ 25 ಚಿತ್ರಗಳನ್ನು ರಚಿಸಲು 7 ವರ್ಷ ತೆಗೆದುಕೊಂಡಿದ್ದರು. ಸ್ವಾಮಿ ಅವರು 178 ಕಲಾಕೃತಿಗಳನ್ನು ಪೂರ್ಣಗೊಳಿಸಲು ಕೇವಲ ಐದು ವರ್ಷ ತೆಗೆದುಕೊಂಡಿದ್ದಾರೆ. ಅವರ ಈ ಕಲಾಕೃತಿಗಳು, ಮಹಾಭಾರತದ ಕಥೆಯನ್ನು ತಿಳಿಯಬಯಸುವ ಆಸಕ್ತರಿಗೆ ಒಂದೇ ಸೂರಿನಡಿ ಮಹಾಕಾವ್ಯದ ಪಕ್ಷಿನೋಟ ಒದಗಿಸುವಂತಿವೆ.

ಕಲಾಕೃತಿಗಳ ಜತೆಯಲ್ಲಿಯೇ ಸ್ವಾಮಿ ಅವರು ಯೂಟ್ಯೂಬ್‌ನಲ್ಲಿ ಮಹಾಭಾರತದ ಕಥೆಯನ್ನು ಮೂರು ಭಾಷೆಗಳಲ್ಲಿ (ಕನ್ನಡ, ಹಿಂದಿ ಮತ್ತು ಇಂಗ್ಲಿಷ್) ಹೇಳಿರುವುದು ಕುತೂಹಲಕಾರಿಯಾಗಿದೆ. ಈಗಾಗಲೇ ಕೆಲವು ಕಂತುಗಳು ಪೂರ್ಣಗೊಂಡಿದ್ದು, ಒಟ್ಟು 39 ಕಂತುಗಳಲ್ಲಿ ಮಹಾಭಾರತದ ಕ್ಯಾನ್ವಾಸ್ ಚಿತ್ರಗಳು ಕಥೆಯನ್ನು ಹೇಳಲಿವೆ.

ಪ್ರತಿಕ್ರಿಯಿಸಿ: feedback@sudha.co.in